http://www.howtoexam.com

L 211

# ಎರಡನೆಯ ಬಿ.ಎ. ಪರೀಕ್ಷೆ, ಮೇ/ಜೂನ್ 2010
## (Revised SIM Scheme)
## ಕನ್ನಡ ಭಾಷೆ (ಪತ್ರಿಕೆ - ೨)
## ಸವಿಸ್ತರ ಮತ್ತು ಅವಿಸ್ತರ ಪಠ್ಯಗಳು
## (ಪ್ರಾಚೀನ ಕನ್ನಡ ಕಾವ್ಯಭಾಗಗಳು, ತುಘಲಕ್, ಕನ್ನಡ ಸಣ್ಣಕತೆಗಳು , ದೇವರು)
## ಹೊಸ ಪಠ್ಯಕ್ರಮ : 2005-06 ರಿಂದ 2009-10ರ ವಿದ್ಯಾರ್ಥಿಗಳಿಗೆ

ಸಮಯ : 3 ಗಂಟೆಗಳು ಗರಿಷ್ಠಾಂಕ : 90

### 'ಎ' ವಿಭಾಗ

1. **ಒಂದರ** ಭಾವಾರ್ಥವನ್ನು ಸಂದರ್ಭಸಹಿತ ವಿವರಿಸಿ : **5**

1.1) ಕಲಿತನದುರ್ಕು ಜವ್ವನದ ಸೊರ್ಕು ನಿಚೇಶನ ನಚ್ಚುಮಿಕ್ಕ ತೋ
ಳ್ವಲದ ಪೊಡರ್ಪು ಕರ್ಣನಿನಗುಳ್ಳನಿತೇನೆನಗುಂಟೆ ಭಾರತಂ।
ಕಲಹಮಿದಿರ್ಚುವಂ ಹರಿಗನಪ್ಪೊಡೆ ಮೊಕ್ಕಳಮೇಕೆನೀಂ ಪಳಂ
ಚಲೆದಪೆಯಣ್ಣ ಸೂಟ್ಟಡೆಯಲಪ್ಪುದು ಕಾಣ ಮಹಾಜಿರಂಗದೊಳ್

1.2) ನಿನ್ನ ಸುಲ್ತಾನನಂಥ ಪ್ರಾಮಾಣಿಕ ಮೋಸಗಾರನನ್ನು ನಾನು ನನ್ನ ಜನ್ಮದಲ್ಲೇ ನೋಡಿಲ್ಲ. ಕೊಲೆ ಮಾಡುವುದು ಮಾಡಿ, ಅದರ ಪಾಪಭಾವನೆಯ ಆನಂದವನ್ನೂ ಉಪಭೋಗಿಸುತ್ತಾನೆ.

2. 2.1) **ಆರು** ಪದಗಳಿಗೆ ಅರ್ಥ ಬರೆಯಿರಿ : **(½×6=3)**

ಉರ್ಕು, ನೃಪ, ಅಂಬು, ಅವನಿ, ರಜ, ಲೇಸು, ಚಕ್ರಿ, ಮಾರ್ದನಿ, ಧುರಂಧರ, ತುರುಕ.

2.2) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(2×2=4)**

ಜೇಡರದಾಸಿಮಯ್ಯ, ಅಷ್ಟಾವಂಕ, ನಜೀಬ, ವಾತ್ಸಲ್ಯಭಾವ

3. **ನಾಲ್ಕಕ್ಕೆ** ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : **(2×4=8)**

(ಪ್ರತಿಪಠ್ಯದಿಂದ **ಎರಡಕ್ಕಿಂತ** ಹೆಚ್ಚಾಗಿ ಉತ್ತರಿಸಬಾರದು)

3.1) ಮುನ್ನೀರ್ಬನ್ನೀರನೆ ಬೆರೆಸಲಣ್ಣ ತಣ್ಣೀರೊಳವೇ ?

**P.T.O.**

Click here to download latest Company placement paper and interview questions

http://www.howtoexam.com



3.2) ತಾನಿಕ್ಕಿದ ತತ್ತಿಯನೆ ಪಾವುನೊಣೆವಂತಕ್ಕುಂ

3.3) ಜೋಳದ ಬೆಳಸಿಂಗೆ ಬೆರ್ಚುಗಟ್ಟಿದತೆಅದಿಂ

3.4) ಬೆಟ್ಟದಾ ತುದಿಯಲ್ಲಿ ಬೆಳೆದ ವೃಕ್ಷಂಗಳಿಗೆ ಕಟ್ಟೆಯನು ಕಟ್ಟಿನೀರ ಹೊಯ್ದವರಾರು

3.5) ಬಯಲಾಗಿ ಹೋಗಲಿ ದಿಲ್ಲಿ ! ಆಗಲೇ ನನಗೆ ಸಮಾಧಾನ

3.6) ಈ ಸುಲ್ತಾನ ಸಂಪೂರ್ಣ ಹುಚ್ಚ

3.7) ನೂರಾರು ಕಾಯಿಲೆಗಳ ಹುತ್ತವಾಗಿದೆ ನನ್ನ ರಾಜ್ಯ

3.8) ಇತಿಹಾಸವೆಂದರೆ ಒಂದು ಟಕ್ಕಾಟಕ್ಕಿ

**'ಬಿ' ವಿಭಾಗ**

4. 4.1) ಸೀತೆಗೆ ಮನಸೋತ ರಾವಣನ ಮನಃಸ್ಥಿತಿಯನ್ನು ನಾಗಚಂದ್ರನು ಹೇಗೆ ಚಿತ್ರಿಸಿದ್ದಾನೆ ? ವಿಶದೀಕರಿಸಿ. **10**

**ಅಥವಾ**

ಕೃಷ್ಣ ಮತ್ತು ಕರ್ಣರ ಸಂವಾದವನ್ನು ವಿವರಿಸಿ.

4.2) **ಒಂದನ್ನು** ಕುರಿತು ಬರೆಯಿರಿ : **5**

1) ಅಕ್ಕಮಹಾದೇವಿಯ ವಚನಗಳಲ್ಲಿ ಪ್ರಕೃತಿ.

2) ಜನಪದರ ಪತಿಪ್ರೇಮಭಾವ.

5. 5.1) ತುಘಲಕ್ ಒಂದು ದುರಂತ ನಾಟಕವೇ ? ಚರ್ಚಿಸಿ ಬರೆಯಿರಿ. **10**

**ಅಥವಾ**

ಸಾಂಕೇತಿಕ ನಾಣ್ಯ ಪ್ರಯೋಗದ ಅಪಯಶಸ್ಸಿಗೆ ಕಾರಣಗಳೇನು ? ವಿವರಿಸಿ.

5.2) **ಒಂದನ್ನು** ಕುರಿತು ಬರೆಯಿರಿ : **5**

1) ಅಝೀಝನ ವ್ಯಕ್ತಿತ್ವ

2) ರಾಜಧಾನಿ ಬದಲಾವಣೆ.

Click here to download latest Company placement paper and interview questions

http://www.howtoexam.com



## 'ಸಿ' ವಿಭಾಗ

6\. 6.1) 'ಕಮಲಪುರ ಹೊಟ್ಲಿನಲ್ಲಿ' ಕಥೆಯಲ್ಲಿನ ವಸ್ತು ಯಾವುದು ? ಅದರ ಆಶಯವನ್ನು ಕುರಿತು ಬರೆಯಿರಿ. **10**

**ಅಥವಾ**

'ನಾಲ್ಕು ಮೊಳ ಭೂಮಿ' ಕಥೆಯ ಮಹತ್ವವೇನು ? ಚರ್ಚಿಸಿ ಬರೆಯಿರಿ.

6.2) **ಎರಡನ್ನು** ಕುರಿತು ಬರೆಯಿರಿ : **(5×2=10)**

1) ಕಾವೇರಿ ಪಾತ್ರದ ಮಹತ್ವ

2) ಆಮಾಸ ಕಥೆಯ ವೈಶಿಷ್ಟ್ಯ

3) ಕನ್ನಡ ನವ್ಯ ಕಥೆಗಾರರು

4) ಬೋಬಣ್ಣ ಓದಿದ ಪತ್ರಗಳು ಯಾವುವು ?

7\. 7.1) 'ದೇವರ' ಬಗ್ಗೆ ಪ್ರಾಚೀನರ ಮನೋಭಾವನೆಗಳನ್ನು ವಿವರಿಸಿ. **10**

**ಅಥವಾ**

ರಾಜಕೀಯ ಮತ್ತು ಮತಧರ್ಮಗಳ ಬಗ್ಗೆ ಲೇಖಕರ ಧೋರಣೆಯನ್ನು ಚಿತ್ರಿಸಿ.

7.2) **ಎರಡನ್ನು** ಕುರಿತು ಬರೆಯಿರಿ : **(5×2=10)**

1) ಆಸ್ತಿಕರು ಮತ್ತು ನಾಸ್ತಿಕರು

2) ದೇವರು ಮತ್ತು ಅನ್ವೇಷಣೆ.

3) ಪರಬ್ರಹ್ಮ

4) ಪ್ರಕೃತಿ ವ್ಯಾಪಾರಗಳು.

———————

Click here to download latest Company placement paper and interview questions